**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಡಿ.ಎಸ್.ಅರುಣ್, ಇವರು ನಿಯಮ 72ರ ಅಡಿಯಲ್ಲಿ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಹೇಳಿಕೆ**

******

**ಸೂಚನೆ:-**

"ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ ವ್ಯಾಪ್ತಿಯಲ್ಲಿ ಕೈಗೊಳ್ಳಬಹುದಾದ ಕಾಮಗಾರಿಗಳ ಕ್ರಿಯಾಯೋಜನೆಗಳು ಅನುಮೋದನೆಗೊಂಡ ತರುವಾಯವು ಒಂದು ಬಾರಿಗೆ ಬದಲಾವಣೆ ಮಾಡಲು ಪ್ರಾಧಿಕಾರದ ಕಾರ್ಯದರ್ಶಿಯವರ ಹಂತದಲ್ಲಿ ನೀಡಲಾಗುತ್ತಿದ್ದ ಅವಕಾಶಕ್ಕೆ ತಡೆ ನೀಡಿರುವುದರಿಂದ ಕಾಮಗಾರಿಗಳ ಪ್ರಗತಿಯಲ್ಲಿ ಹಿನ್ನಡೆ ಉಂಟಾಗಿರುವ ಕುರಿತು ನಿಯಮ 72 ರ ಅಡಿಯಲ್ಲಿ ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಸಚಿವರ ಗಮನ ಸೆಳೆಯಬಯಸುತ್ತೇನೆ."

**ಉತ್ತರ:-**

ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ವ್ಯಾಪ್ತಿಯಲ್ಲಿ ಕೈಗೊಳ್ಳಬಹುದಾದ ಕಾಮಗಾರಿಗಳ ಕ್ರಿಯಾಯೋಜನೆಗಳು ಮಂಡಳಿಯ ಅಧಿನಿಯಮ, 1991 ಮತ್ತು ನಿಯಮಗಳು, 1993ರಲ್ಲಿನ ಅಧ್ಯಾಯ-IIIರಲ್ಲಿನ ಕ್ರಮ ಸಂಖ್ಯೆ 12ರಲ್ಲಿ ಈ ಕೆಳಗಿನಂತೆ ಅವಕಾಶ ಕಲ್ಪಿಸಲಾಗಿರುತ್ತದೆ.

**"1. ಮಂಡಳಿಯ ಮಲೆನಾಡು ಪ್ರದೇಶದ ಅಭಿವೃದ್ಧಿಗಾಗಿ ಪ್ರತಿ ವರ್ಷವೂ ಒಂದು ವಾರ್ಷಿಕ ಯೋಜನೆಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ಅನುಮೋದನೆಗಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು, ರಾಜ್ಯ ಸರ್ಕಾರವು ಯೋಜನೆಯನ್ನು ಮಾರ್ಪಾಟಿನೊಂದಿಗೆ ಅಥವಾ ಮಾರ್ಪಾಟು ಇಲ್ಲದೆಯೇ ಅನುಮೋದಿಸಬಹುದು."**

ಹೀಗೆ ಅನುಮೋದನೆಯಾದ ಕ್ರಿಯಾಯೋಜನೆಗಳನ್ನು ಯಾವ ಪ್ರಾಧಿಕಾರ ಅನುಮೋದನೆ ನೀಡುತ್ತದೆಯೋ ಅದೇ ಪ್ರಾಧಿಕಾರ ಕಾಮಗಾರಿಗಳ ಬದಲಾವಣೆಗೆ ಅನುಮೋದನೆ ನೀಡಬೇಕಾಗಿರುವುದು ಮಂಡಳಿಯ ಕಾಯ್ದೆ ಪ್ರಕಾರ ನಿಯಮ ವಾಗಿರುತ್ತದೆ. ಆದರೆ, ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ. ಡಿ.ಎಸ್. ಆರುಣ್ ರವರು ಕಾಮಗಾರಿಗಳನ್ನು ಒಂದು ಬಾರಿ ಬದಲಾವಣೆ ಮಾಡಲು ಪ್ರಾಧಿಕಾರದ ಕಾರ್ಯದರ್ಶಿಗಳ ಹಂತದಲ್ಲಿ ನೀಡಲಾಗುತ್ತಿದ್ದ ಅವಕಾಶಕ್ಕೆ ತಡೆ ನೀಡಿರುವುದರಿಂದ, ಕಾಮಗಾರಿಗಳ ಪ್ರಗತಿಯಲ್ಲಿ ಹಿನ್ನಡೆ ಉಂಟಾಗಿದೆ ಎಂದು ಗಮನ ಸೆಳೆಯಲು ಸೂಚನೆ ನೀಡಿರುವುದು, ಮಂಡಳಿಯ ಕಾಯ್ದೆಗೆ ವಿರುದ್ಧ ವಾಗಿರುತ್ತದೆ.

ಮಾನ್ಯ ಸದಸ್ಯರುಗಳು ಕಾಮಗಾರಿಗಳನ್ನು ಪದೆ ಪದೇ ಬದಲಾವಣೆ ಮಾಡುವುದರಿಂದ ಕಾಮಗಾರಿಗಳ ಪ್ರಗತಿಗೆ ಹಿನ್ನಡೆಯಾಗುತ್ತದೆ ಹೊರತು ಸರ್ಕಾರದ ಹಂತದಲ್ಲಿ ಕಾಮಗಾರಿಗಳ ಬದಲಾವಣೆಗೆ ಕಾಯ್ದೆ ಪ್ರಕಾರ ಅನುಮೊದನೆ ನೀಡುವುದರಿಂದ ಹಿನ್ನಡೆ ಯಾಗುವುದಿಲ್ಲ, ಎಂಬ ಅಂಶವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

**(ಸಂಖ್ಯೆ: ಪಿಡಿಎಸ್ 8 ಎಂಡಿಬಿ 2024)**

(ಡಿ.ಸುಧಾಕರ್)
**ಯೋಜನೆ,ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಸಚಿವರು.**